# ಸಿರಿಗಂಧ

## ಎಲ್. ಎಸ್. ಶಾಸ್ತ್ರಿ ಅಭಿನಂದನ ಸಂಪುಟ



-ಪ್ರಧಾನ ಸಂಪಾದಕರು-

**ಡಾ. ಎಚ್. ಆಯ್. ತಿಮ್ಮಾಪೂರ**

-ಸಂಪಾದಕರು-

ಡಾ. ಎಚ್. ಬಿ. ಕೋಲ್ಕಾರ

ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ

# ಸಿರಿಗಂಧ

## ಎಲ್. ಎಸ್. ಶಾಸ್ತ್ರಿ ಅಭಿನಂದನ ಸಂಪುಟ


– ಪ್ರಧಾನ ಸಂಪಾದಕರು –

ಡಾ. ಎಚ್. ಆಯ್. ತಿಮ್ಮಾಪೂರ

– ಸಂಪಾದಕರು –

ಡಾ. ಎಚ್. ಬಿ. ಕೋಲ್ಕಾರ

ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ



ಶ್ರೀ ಎಲ್. ಎಸ್. ಶಾಸ್ತ್ರಿ ಅಭಿನಂದನ ಸಮಿತಿ, ಬೆಳಗಾವಿ

# ಸಿರಿಗಂಧ

**ಎಲ್. ಎಸ್. ಶಾಸ್ತ್ರಿ ಅಭಿನಂದನ ಸಂಪುಟ**


| | |
|---|---|
| ಪ್ರಧಾನ ಸಂಪಾದಕರು | : ಡಾ. ಎಚ್. ಆಯ್. ತಿಮ್ಮಾಪೂರ |
| ಸಂಪಾದಕರು | : ಡಾ. ಎಚ್. ಬಿ. ಕೋಲ್ಕಾರ<br>ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ |

**ISBN : 978-81-88699-35-3**

| | |
|---|---|
| ಪ್ರಕಾಶಕರು | : ಬಿಜ್ ಬಜ್<br># 2, 1ನೇ ಅಡ್ಡರಸ್ತೆ, ಕಾಳಿದಾಸ ಲೇಔಟ್,<br>ಶ್ರೀನಗರ, ಬೆಂಗಳೂರು–560050 |
| ಹಕ್ಕುಗಳು | : ಎಲ್. ಎಸ್. ಶಾಸ್ತ್ರಿ<br>ಸೋಮನಾಥ ಅಪಾರ್ಟಮೆಂಟ,<br>3ನೇ ತಿರುವು ಭಾಗ್ಯನಗರ,<br>ಬೆಳಗಾವಿ–590006<br>**Mo- 9480737637** |
| ವರ್ಷ | : 2018 |
| ಬಳಸಿದ ಕಾಗದ | : 70 ಜಿ.ಎಸ್.ಎಮ್, ಮ್ಯಾಪಲಿಥೋ. |
| ಆಕಾರ | : 1/8 ಡೆಮಿ |
| ಪ್ರತಿಗಳು | : 1000 |
| ಪುಟಗಳು | : 538 |
| ಬೆಲೆ | : ರೂ. 400/– |
| ಅಕ್ಷರ ಜೋಡಣೆ | : ಪ್ರಹ್ಲಾದಕುಮಾರ ಜೋಶಿರಾಪೂರ |
| ಮುಖಪುಟ ವಿನ್ಯಾಸ | : ಮಧುಕರ ಗುಂಡೇನಟ್ಟಿ |
| ಮುದ್ರಕರು | : ಓಂಕಾರ ಮುದ್ರಣಾಲಯ, ಕೊಲ್ಹಾಪೂರ |

# ಪರಿವಿಡಿ

**ಸಂಪಾದಕೀಯ**

**ಶುಭ ಸಂದೇಶಗಳು**

**ಸವ್ಯಸಾಚಿ : ವ್ಯಕ್ತಿ-ವ್ಯಕ್ತಿತ್ವ**

೧ ಧೀಮಂತ ಬರಹಗಾರ – ಡಾ. ಸಿದ್ಧರಾಮ ಸ್ವಾಮಿಗಳು ೨೫

೨ ಹಲವು ಶಕ್ತಿಗಳ ಸಂಗಮ – ಪೂಜ್ಯಗುರುಸಿದ್ಧಸ್ವಾಮಿಗಳು ೨೯

೩ ಎಲ್ಲರೊಳಗೊಂದಾದ ಶಾಸ್ತ್ರಿಯವರು – ಚೆನ್ನವೀರ ಕಣವಿ ೩೪

೪ ನಿಷ್ಕಾಮ ಕರ್ಮಯೋಗಿ – ಡಾ. ಪಂಚಾಕ್ಷರಿ ಹಿರೇಮಠ ೩೬

೫ ಬೆಳಗಾವಿಗೊಂದು ಆಸ್ತಿ – ಡಾ. ಎಚ್ಚೆಸ್ಕೆ ೩೮

೬ ಸಹೃದಯ ಬಂಧು – ಡಾ. ಎಂ. ಅಕಬರ ಅಲಿ ೪೦

೭ ಹೃದಯ ವಿಹಾರಿ – ಪ್ರೊ. ಹಂ. ಪ. ನಾಗರಾಜಯ್ಯ ೪೧

೮ ಶಿಖರಸಾಧಕ – ಡಾ. ಎಂ.ಜಿ.ಆರ್. ಅರಸ್ ೪೩

೯ ನಮ್ಮ ಶಾಸ್ತ್ರಿಗಳು – ಡಾ. ಹ. ವೆಂ. ಕಾಖಂಡಿಕಿ ೪೬

೧೦ ಶಾಸ್ತ್ರಿ : ಶಾಪಗ್ರಸ್ತ ಋಷಿ – ಭೀಮಸೇನ ತೊರಗಲ್ಲ ೪೯

೧೧ ಸಾವಿರದ ಬರಹಗಳ ಸರದಾರ – ಅಮ್ಮೆಂಬಳ ಆನಂದ ೫೨

೧೨ ಬಹುಶ್ರುತ ಓದುಗ – ಡಾ. ಶ್ಯಾಮಸುಂದರ ಬಿದರಕುಂದಿ ೫೫

೧೩ ಹಲವು ಹವ್ಯಾಸಗಳ ಕೂಡಲಸಂಗಮ –ಬಿ.ಎಸ್. ಗವಿಮಠ ೫೮

೧೪ ಅಭಿನವ ಕಾರಂತ – ಪ್ರೊ. ಎಂ. ಎಸ್. ಇಂಚಲ ೬೧

೧೫ ಸ್ವರಪ್ರಿಯ ಎಲ್. ಎಸ್ – ನೀಲಗಂಗಾ ಚರಂತಿಮಠ ೬೪

೧೬ ದಣಿವರಿಯದ ಸಾಧಕ – ಡಾ. ಬಸವರಾಜ ಜಗಜಂಪಿ ೬೮

೧೭ ತುಂಬಿದ ಕೊಡ – ರಂಜನ ಭಟ್ಟ ೭೩

೧೮ ಸಾಹಿತ್ಯಾಕಾಶದ ಮಿನುಗು ತಾರೆ – ಅರುಣಕುಮಾರ ಹಬ್ಬು ೭೭

೧೯ ಸಕಲರಿಗೆ ಲೇಸನೇ ಬಯಸುವ...- ಮಲ್ಲಿಕಾರ್ಜುನ ಹುಲಗಬಾಳಿ ೮೨
೨೦ ಅಪ್ಪಟ ಬಂಗಾರ - ಕು. ಗೋ ೮೫
೨೧ ಅಪರೂಪದ ಗೆಳೆಯ - ದಯಾನಂದ ತೊರ್ಕೆ ೮೭
೨೨ ಸಾಂಸ್ಕೃತಿಕಲೋಕದ ಧ್ರುವತಾರೆ - ಪಿ. ಬಿ. ಸ್ವಾಮಿ ೮೯
೨೩ ಅಪ್ಪಟ ಶರಣ - ಡಾ. ಗುರುದೇವಿ ಹುಲೆಪ್ಪನವರಮಠ ೯೩
೨೪ ಅಪರೂಪದ ವ್ಯಕ್ತಿ-ಅಗಾಧ ಶಕ್ತಿ! - ರಂಜನಾ ನಾಯಕ ೯೭
೨೫ ಸಾಹಿತ್ಯದ ಸವ್ಯಸಾಚಿ - ನಾರಾಯಣ ಯಾಜಿ ೧೦೦
೨೬ ನಾನು ಕಂಡಂತೆ ಎಲ್. ಎಸ್. - ಸಿ. ಕೆ. ಜೋರಾಪೂರ ೧೦೫
೨೭ 'ದರ್ವೇಶಿ'ಯಾಗದ ಧೀಮಂತ - ಕೃಷ್ಣಮೂರ್ತಿ ಹೆಬ್ಬಾರ ೧೧೦
೨೮ ಹರಿವ ನದಿ - ಡಾ. ಕವಿತಾ ಕುಸುಗಲ್ಲ ೧೧೪
೨೯ ಶಾಸ್ತ್ರಿ ಉಳಿದಿಹರಿಲ್ಲೇ ನಮಗಾಗಿ - ವೆಂಕಟೇಶ ಹುಣಶೀಕಟ್ಟಿ ೧೧೭
೩೦ ಸಂಘಟನಾ ಚತುರರು - ಲೀಲಾ ಕಲಕೋಟಿ ೧೨೧
೩೧ ಮೂರ್ತಿ ಚಿಕ್ಕದು-ಕೀರ್ತಿ ದೊಡ್ಡದು - ವಿ. ಎನ್. ಜೋಶಿ ೧೨೫
೩೨ ಬಹುಮುಖಿ ವ್ಯಕ್ತಿತ್ವ - ರಾಮ ಹೆಗಡೆ ಕೆರೆಮನೆ ೧೨೯
೩೩ ಸ್ವಯಂ ನಿರ್ಮಿತ ವ್ಯಕ್ತಿ - ಡಾ. ಆರ್. ವಿ. ಭಂಡಾರಿ ೧೩೧
೩೪ ಎಲ್ಲೆಲ್ಲೂ ಸೈ ಸೈ ಎಲ್ಲೆಸ್ಸೆಸ್ - ಡಾ. ಶ್ರೀಪಾದ ಶೆಟ್ಟಿ ೧೩೪
೩೫ ಜಾತ್ಯತೀತ ನಿಲುವಿನ ವ್ಯಕ್ತಿ - ಡಾ. ಪಂಚಾಕ್ಷರಿ ಹೊಸಮಠ ೧೩೯
೩೬ ಸದುವಿನಯ-ಮೃದು ಹೃದಯ - ಆರ್. ಎಸ್. ಪಾಟೀಲ ೧೪೧
೩೭ ಆದರಣೀಯರು - ಜಿ. ಎಸ್. ಹೆಗಡೆ, ಬೆಂಗಳೂರು ೧೪೫
೩೮ ನನ್ನ ಕಣ್ಣಂಚಿನಲ್ಲಿ ಕಂಡ ಶಾಸ್ತ್ರಿ - ಎಂ. ಆರ್. ದೊರೆಸ್ವಾಮಿ ೧೪೭
೩೯ ಆಲ್ ಇನ್ ಒನ್ - ಎಂ. ಸಿ. ಅಂಟಿನ ೧೫೧
೪೦ ಬೆಳಕಿನಿಂದ ಬೆಳಕಿನೆಡೆಗೆ - ಎಲ್. ವಿ. ಪಾಟೀಲ ೧೫೪
೪೧ ಜೀವನ್ಮುಖಿ ಬದುಕು - ಶಿವಾನಂದ ಬೆಳಕೂಡ ೧೫೭
೪೨ ಕ್ರಿಯಾಶೀಲ ವ್ಯಕ್ತಿ - ಎ. ಎ. ಸನದಿ ೧೫೯
೪೩ ಸಾಹಿತ್ಯ, ಪರೋಪಕಾರ ಹಾಗೂ ಎಲ್ಲೆಸ್-ಮೋಹನ ಕಳಸದ ೧೬೨

೪೪ ಗಡಿಯಲ್ಲಿ ನುಡಿತೇರು ಕಟ್ಟಿದ ಗುಡಿಗಾರ–ಡಾ. ಜಿ. ಎಸ್. ಹೆಗಡೆ ೧೬೬
೪೫ ದೈತ್ಯ ಪ್ರತಿಭೆ ಇವರದು – ಶಕುಂತಲಾ ದಂಡಗಿ ೧೬೯
೪೬ ಸರಳ ಸ್ವಭಾವದ ಪ್ರಾಮಾಣಿಕ ವ್ಯಕ್ತಿ –ಪುಷ್ಪಾ ಮುರಗೋಡ ೧೭೧
೪೭ ನಿರಪೇಕ್ಷ ಕರ್ಮಯೋಗಿ – ದೀಪಿಕಾ ಚಾಟೆ ೧೭೪
೪೮ ಸಜ್ಜನರ ಸಂಗದಲ್ಲಿ – ಜ್ಯೋತಿ ಬದಾಮಿ ೧೭೭
೪೯ ಸಾಂಸ್ಕೃತಿಕ ಕಾಳಜಿಯ ಮನುಷ್ಯ – ನಿರ್ಮಲಾ ಪ್ರಕಾಶ ೧೮೦
೫೦ ಪಾದರಸದಂತಿರುವ ವ್ಯಕ್ತಿತ್ವ – ಸುಧಾ ಭಂಡಾರಿ ೧೮೩
೫೧ ಸರ್ವ ಜನಪ್ರಿಯ ಶಾಸ್ತ್ರಿ – ಸ. ರಾ. ಸುಳಕೂಡೆ ೧೮೬
೫೨ ಸವ್ಯಸಾಚಿ – ಶಿ. ಗು. ಕುಸುಗಲ್ಲ ೧೯೧
೫೩ ಸಾಂಸ್ಕೃತಿಕ ರಾಯಭಾರಿ – ಆವಳಿಕುಮಾರ ೧೯೪
೫೪ ಬರವಣಿಗೆ ಪಯಣದ ಅಂಬಿಗ – ಪಾರ್ವತಿ ಪಿಟಗಿ ೧೯೭
೫೫ ಸ್ಫೂರ್ತಿಯ ಸೆಲೆ – ಡಾ. ಹೇಮಾ ಸೊನೊಳಿ ೨೦೧
೫೬ ನಾನೂ ಶಾಸ್ತ್ರಿ ಆಗಬೇಕು.... – ಆನಂದ ಪುರಾಣಿಕ ೨೦೩
೫೭ ನಮ್ಮೆಲ್ಲರ ಮಾರ್ಗದರ್ಶಕರು – ಸುನಂದ ಸಿದ್ದಪ್ಪ ಮುಳೆ ೨೦೭
೫೮ ತ್ರಿವಿಕ್ರಮನಾದ ವಾಮನ – ನಾಗೇಶ ನಾಯಕ ೨೦೯
೫೯ ಸರ್ವಾಧ್ಯಕ್ಷ ಶಾಸ್ತ್ರೀಜಿ – ಬಸವರಾಜ ಸಸಾಲಟ್ಟಿ ೨೧೨
೬೦ ಕಲಾವಿದರ ಪ್ರೋತ್ಸಾಹಿ – ಪ್ರಭಾಕರ ಶಹಾಪೂರಕರ ೨೧೫
೬೧ ಎವರ್‌ಗ್ರೀನ್ ಎಲ್ಲೆಸ್ – ಆರ್. ಎಸ್. ಚಾಪಗಾವಿ ೨೧೬
೬೨ ಸಾಹಿತ್ಯಲೋಕದ ಗಾರುಡಿಗ – ಬಾಬು ನಾಯಿಕ ೨೧೯
೬೩ ಉತ್ತರ ಕರ್ನಾಟಕದ ಬೋಧಿವೃಕ್ಷ – ಎಂ. ಎ. ಪಾಟೀಲ ೨೨೩
೬೪ ವಸ್ತುನಿಷ್ಠರಾದ ಶಾಸ್ತ್ರಿ ಸರ್ – ಜೆ. ಪಿ. ವಿಜಯಕುಮಾರ ೨೨೬
೬೫ ಬೆಳಗಾವಿ ಬೆಳಕು – ಆಶಾ ಯಮಕನಮರಡಿ ೨೩೧
೬೬ ನಮ್ಮ ಶಾಸ್ತ್ರಿ ಗುರುಗಳು – ಶಶಿಕಲಾ ನಾಡಗೌಡ ೨೩೩
೬೭ ಜೀವನೋತ್ಸಾಹಕ್ಕೆ ಮಾದರಿ – ಶಕುಂತಲಾ ಬಾಳೇಕುಂದ್ರಿ ೨೩೫
೬೮ ೭೫ರಲ್ಲೂ ೨೫ರ ಉತ್ಸಾಹ – ಡಾ. ವಿಜಯಾ ಡಾಂಗೆ ೨೩೭
೬೯ ಕಾಯಕಯೋಗಿ – ಎಂ. ವೈ. ಮೆಣಸಿನಕಾಯಿ ೨೩೯

೭೦ ಬಂಗಾರದಂಥ ಮನುಷ್ಯ – ರುದ್ರಾಂಬಿಕಾ ಯಾಳಗಿ ೨೪೨

೭೧ ಬಹುವಿಧ ಪ್ರತಿಭೆ – ಡಾ. ವಿ. ಬಿ. ನಾಯಕವಾಡಿ ೨೪೪

೭೨ 'ಸಾವಿರದ' ಸಾಹಿತಿ – ಸೋಮಶೇಖರ ಸೊಗಲದ ೨೪೬

೭೩ ಜನಾನುರಾಗಿ ವ್ಯಕ್ತಿ – ಶಿವಪುತ್ರ ಯಾದವಾಡ ೨೪೯

೭೪ ಸಜ್ಜನ ಶಾಸ್ತ್ರಿಯವರು – ಸುನಂದಾ ಎಮ್ಮಿ ೨೫೪

೭೫ ಶಬ್ದ ಶ್ರೀಮಂತಿಕೆ – ವಿಲಾಸ ಅಧ್ಯಾಪಕ ೨೫೯

೭೬ ಇವರೇ ನಮ್ಮ ಶಾಸ್ತ್ರೀ ಸರ್... – ರಾಜೇಂದ್ರ ಪಾಟೀಲ ೨೬೩

೭೭ ಯುವ ಪ್ರತಿಭೆಗಳಿಗೆ ಪ್ರೇರಣಾ ಶಕ್ತಿ – ಶಶಿಧರ ಘಿವಾರಿ ೨೬೫

೭೮ ಶಾಸ್ತ್ರಿಯವರದು ಮೇರು ವ್ಯಕ್ತಿತ್ವ – ಭಾರತಿ ಭಟ್ ೨೬೭

೭೯ ಕಡಿಮೆ ಭಾರ ಹೆಚ್ಚು ತೂಕ – ಸುಬ್ರಹ್ಮಣ್ಯ ಭಟ್ ೨೭೦

೮೦ ಹಮ್ಮು ಬಿಮ್ಮಿಲ್ಲದ ಹೊಂಗೊಡ – ಶ್ವೇತಾ ನರಗುಂದ ೨೭೧

೮೧ ಅಪ್ಪಟ ಕನ್ನಡಾಭಿಮಾನಿ – ಡಾ. ಮಹೇಶ ಗುರನಗೌಡರ ೨೭೩

೮೨ ಸಂದರ್ಶನ ಲೇಖನ – ಗುಂಡೇನಟ್ಟಿ ಮಧುಕರ ೨೭೬

೮೩ ಬಹುಮುಖ ಪ್ರತಿಭೆ – ಡಾ. ಪಿ. ಜಿ. ಕೆಂಪಣ್ಣವರ ೨೮೧

೮೪ ಇರುವುದೆಲ್ಲವ ಬಿಟ್ಟು ಇರದುದರತ್ತ....–ಡಾ. ವಾಸುದೇವ ಶೆಟ್ಟಿ ೨೮೩

೮೫ ಶಬ್ದದೊಳು ತುಯ್ದು ದನಿಯಾದವರು–ಜಯಾನಂದ ಮಾದರ ೨೮೬

೮೬ ಗುಣಸಂಪನ್ನ – ಮೋಹನ ಹಬ್ಬು ೨೯೨

೮೭ ಸಾರ್ಥಕ ಬದುಕು – ನಾ. ಸು. ಭರತನಹಳ್ಳಿ ೨೯೫

೮೮ ಅಪ್ಪಟ ಸ್ವಾಭಿಮಾನಿ – ವಿ. ಎಸ್. ಹೆಗಡೆ ೨೯೮

೮೯ ಶಕ್ತಿಯುಳ್ಳ ಸರಳ ವ್ಯಕ್ತಿ – ಲಾಲಸಾಬ ನದಾಫ ೩೦೩

೯೦ ಸಮಾಜಪ್ರಿಯ ಶಾಸ್ತ್ರಿ – ವಿ. ಕೆ. ವೀಣಾಕರ ೩೦೬

೯೧ ನಲಿವು ಹಂಚಿಕೊಂಡ ಸಜ್ಜನ – ಬಿ. ವಿ. ಮಲ್ಲಿಕಾರ್ಜುನಯ್ಯ ೩೦೯

೯೨ ಅಪೂರ್ವ ಕ್ರಿಯಾಶೀಲರು – ಮೋಹನ ಗುಂಡ್ಲೂರು ೩೧೨

೯೩ ಶಾಸ್ತ್ರಿಯೆಂಬ ಸೂಜಿಗಲ್ಲು – ಬಾಳೇಶ ಸಸಾಲಟ್ಟಿ ೩೧೭

೯೪ ಶಾಸ್ತ್ರಿಯಂಥವರು ಅಪರೂಪ – ಎಂ. ಬಿ. ದೇಸಾಯಿ ೩೨೦

೯೫ ಕಲಾ ಸಾರ್ವಭೌಮ – ರಜನಿ ಜೀರಗ್ಯಾಳ ೩೨೨

೯೬ ಸರಳ ವ್ಯಕ್ತಿತ್ವದ ಶಾಸ್ತ್ರಿ – ಪಿ. ಬಿ. ಯಲಿಗಾರ ೩೨೪

**ಸಾಹಿತ್ಯ ಸುಗಂಧ – ಕೃತಿಗಳ ಸಮೀಕ್ಷೆ**


೯೭ 'ಅಲ್ಲಿಂದ ಇಲ್ಲಿಯವರೆಗೆ' (ಕಾವ್ಯ) – **ಡಾ. ವಾಯ್. ಎಂ. ಯಾಕೊಳ್ಳಿ** ೩೨೯

೯೮ ಓ ಸಿಯಾಂ ನಿನಗೆ ಸಲಾಂ (ಪ್ರವಾಸ) – **ಶಾ. ಮಂ. ಕೃಷ್ಣರಾಯ** ೩೪೩

೯೯ ಉಡುಗಣ (ಚುಟುಕುಗಳು) – **ಜಿನದತ್ತ ದೇಸಾಯಿ** ೩೫೦

೧೦೦ ರಗಳೆ ರಾಧಕ್ಕ (ಹರಟೆ) – **ಡಾ. ಬಿ. ಎ. ಸನದಿ** ೩೫೭

೧೦೧ ಕನ್ನಡ ರಸಯಾತ್ರೆ – (ಪ್ರವಾಸ) – **ಡಾ. ಜಿ. ಎಂ. ಹೆಗಡೆ** ೩೬೪

೧೦೨ ಮಹಾ ಬಲಿ (ಯಕ್ಷಗಾನ) – **ಗೋಪಾಲಕೃಷ್ಣ ಭಾಗವತ** ೩೬೬

೧೦೩ ಪಂಚವಟಿ (ಅನುವಾದ) – **ಡಾ. ವಾಯ್. ಎಂ. ಯಾಕೊಳ್ಳಿ** ೩೭೬

೧೦೪ ಮಲಾಲಾ – **ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ** ೩೮೮

೧೦೫ ವಿಲೋಕನ (ವೈಚಾರಿಕ) – **ಮಹಾಲಿಂಗ ಮಂಗಿ** ೩೯೭

೧೦೬ ಸ್ವಾತಂತ್ರ್ಯ ಸಂಗ್ರಾಮ : ಚರಿತ್ರೆ – **ಮಧುಪ, ಬೆಂಗಳೂರು** ೪೦೯

೧೦೭ ಗಂಗಾಧರರಾವ ದೇಶಪಾಂಡೆ (ಚರಿತ್ರೆ) – **ದೀಪಿಕಾ ಚಾಟೆ** ೪೧೪

೧೦೮ ಅನುಸಂಧಾನ – **ಡಾ. ಎಚ್. ಬಿ. ಕೋಲ್ಕಾರ** ೪೧೭

೧೦೯ ಶರಣ ಸಾಹಿತ್ಯ ಕೃತಿಗಳು – **ಅಶೋಕ ಮಳಗಲಿ** ೪೨೬

೧೧೦ ಉ.ಕನ್ನಡಿಗ ಬರಹಗಾರರು – **ನಾರಾಯಣ ಶಾನಭಾಗ** ೪೩೦

೧೧೧ ವಾತಾಯನ (ವೈಚಾರಿಕ) – **ನಾಗೇಶ ನಾಯಕ** ೪೩೬

೧೧೨ ಶಾಸ್ತ್ರಿಯವರ "ಶೃಂಗಾರ" ಪತ್ರಿಕೆ – **ಗೋಪಾಲಕೃಷ್ಣ ನಾಯಕ** ೪೪೨

೧೧೩ ಮಾತಾಡಿದ್ದಾಂಗ...(ವಿಶ್ಲೇಷಣೆ) – **ಗಜಾನನ ಈಶ್ವರ ಹೆಗಡೆ** ೪೪೬

೧೧೪ ಜೀವನ ಚರಿತ್ರೆಗಳು – **ಮಹಾಂತೇಶ ಜಿ.** ೪೪೮


**ಕಾವ್ಯಸಿರಿ**


೧೧೫ ಹಾರೈಕೆ – **ಬಿ. ಎ. ಸನದಿ** ೪೫೩

೧೧೬ ಶಾಸ್ತ್ರಿಗಳ ಅಮೃತ ವರ್ಷ – **ಬಸವರಾಜ ವಕ್ಕುಂದ** ೪೫೪

೧೧೭ ಕಾವ್ಯಸಿರಿ – **ಗಜಾನನ ಈಶ್ವರ ಹೆಗಡೆ** ೪೫೬

೧೧೮ ಲಯಬದ್ಧ ಹಾಡು – **ಬಸವರಾಜ ಕುಡಚಿ** ೪೫೭

೧೧೯ ಸಕಲಕಲಾ ವಲ್ಲಭ – **ಬಿ. ಎಸ್. ಜಗಾಪುರ** ೪೫೯

೧೨೦ ಚುಟುಕು ವಂದನೆ – ಟಿ. ಸಿ. ಮೊಹರೆ ೪೬೧
೧೨೧ ಸಹೃದಯಿ – ನದೀಮ ಅ. ಸನದಿ ೪೬೩
೧೨೨ ಮರೆಯಲಾರದವರು – ಜಯಶ್ರೀ ನಿರಾಕಾರಿ ೪೬೫

**ಕುಟುಂಬ ಸಿರಿ**

೧೨೩ ನನ್ನ ತಮ್ಮ ಹಾಗಿದ್ದ – ಹೀಗಾಗಿದ್ದಾನೆ – ಟಿ. ಎಸ್. ಶಾಸ್ತ್ರಿ ೪೬೯
೧೨೪ ನನ್ನವರು – ನಾನು ಕಂಡಂತೆ – ಶಾರದಾ ಶಾಸ್ತ್ರಿ ೪೭೨
೧೨೫ ಎಲ್ಲರಂಥವರಲ್ಲ ನನ್ನ ಚಿಕ್ಕಪ್ಪ – ಗೌರೀಶ ಶಾಸ್ತ್ರಿ ನಾಜಗಾರ ೪೭೫
೧೨೬ ಅಪ್ಪನ ಬಗ್ಗೆ ಎರಡು ಮಾತು – ಮೇಧಾ ಸಂಜೀವ ೪೭೮
೧೨೭ ನನ್ನ ಅಪ್ಪ – ನನ್ನ ಹೆಮ್ಮೆ – ಡಾ. ಅಂಬಿಕಾ ಸುಬ್ರಹ್ಮಣ್ಯ ೪೮೦
೧೨೮ ಅಂತರಂಗದಾ ಮೃದಂಗ.... – ಎಲ್. ಎಸ್. ಶಾಸ್ತ್ರಿ ೪೮೨

**ಸಾಧನೆಯ ಸಿರಿ**

೧೨೯ ಶ್ರೀ ಎಲ್. ಎಸ್. ಶಾಸ್ತ್ರಿಯವರ ಕಿರು ಪರಿಚಯ ೫೦೭

**ಚಿತ್ರ ಸಿರಿ**

೧೩೦ ನೆನಪಿನೋಕುಳಿಯ ಚಿತ್ತಾರಗಳು ೫೨೧

❖ ❖ ❖

# ಅನುಸಂಧಾನ

ಡಾ. ಎಚ್. ಬಿ. ಕೋಲ್ಕಾರ

ಸಾಹಿತ್ಯ ಮತ್ತು ಪತ್ರಿಕಾ ಕ್ಷೇತ್ರದಿಂದ ಬೆಳಗಾವಿಗೆ ಬೆಳಕಾದವರು ಎಲ್. ಎಸ್. ಶಾಸ್ತ್ರಿಯವರು. ಇಂದು ಎಪ್ಪತ್ತೈದು ತುಂಬುತ್ತಿದ್ದರೂ ಇಪತ್ತೈದರ ಚೈತನ್ಯದ ತರುಣರಾಗಿ ಪಾದರಸದ ವ್ಯಕ್ತಿತ್ವ ಹೊಂದಿದ ಇವರು ನಿಂತ ನೀರಾಗದೆ, ಜಗ್ಗಿದ ಕಡೆ ಬಾಗದೆ ಎಲ್ಲರಿಗೂ ಬೇಕಾಗಿ ಬೀಗಿದವರು. ನಾಡಿನ ಅನೇಕ ದಿಗ್ಗಜ ಕವಿ ಸಾಹಿತಿಗಳ ಒಡನಾಟದಲ್ಲಿ ಬೆಳೆದವರು. ಅವರ ಪ್ರೇರಣೆ, ಪ್ರಭಾವದಲ್ಲಿಯೇ ನಾಡು ನುಡಿ, ಸಂಗೀತ, ಕಲೆ, ಸಾಹಿತ್ಯ, ಸಂಸ್ಕೃತಿಗಳನ್ನು ಮೈಗೂಡಿಸಿಕೊಂಡು ಅವುಗಳ ವರ್ಧನೆಗಾಗಿ ಹಗಲಿರುಳೂ ಬಿಡುವಿಲ್ಲದೆ ದುಡಿದವರು. ಸಮಾಜದ ಉನ್ನತಿಗೆ ಬದುಕನ್ನು ಗಂಧವಾಗಿ ತೇಯ್ದವರು. ಬದುಕು-ಬರಹವನ್ನು ಒಂದಾಗಿಸಿಕೊಂಡು ಕಳೆದ 50 ವರ್ಷಗಳಿಂದ ಸಾಹಿತ್ಯ ರಚಕರಾಗಿ, ಸಂಘಟಕರಾಗಿ, ಸಂಸ್ಕೃತಿ ಪ್ರಚಾರಕರಾಗಿ ಸಮಾಜಕ್ಕೆ ನೀಡಿದ ಕೊಡುಗೆ ಅನನ್ಯವಾಗಿದೆ. ಕಾವ್ಯ, ಜೀವನ ಚರಿತ್ರೆ, ಶಿಸು ಸಾಹಿತ್ಯ, ಚುಟುಕು, ಶರಣ ಸಾಹಿತ್ಯ, ಅನುವಾದ, ಇತಿಹಾಸ, ಪ್ರವಾಸ, ಚಿಂತನ-ಮಂಥನ, ಅನುಸಂಧಾನ ಇತ್ಯಾದಿ ರೂಪದಲ್ಲಿ ಮತ್ತು ಸಾವಿರಾರು ಪತ್ರಿಕಾ ಲೇಖನಗಳ ರೂಪದಲ್ಲಿ ಅದು 'ಸಿರಿಗಂಧ' ಸ್ವರೂಪ ತಳೆದಿದೆ. ಶಾಸ್ತ್ರಿ ಅವರು ಸರಳ, ಸಜ್ಜನ, ಸೌಜನ್ಯಮೂರ್ತಿಗಳಾಗಿ ಬಹು ಎತ್ತರವಾಗಿ ಬೆಳೆದಿದ್ದಾರೆ. ನಾಡಿನ ತುಂಬ ಅನೇಕರನ್ನು ಘನತೆಯಲ್ಲಿ ಬೆಳೆಸಿದ್ದಾರೆ. ಅವರ ಕರುಣೆಯ ಕಣ್ಣಲ್ಲಿ ನಾನೂ ಒಬ್ಬನಾದುದೇ ನನ್ನ ಅದೃಷ್ಟ!

ಶಾಸ್ತ್ರಿಯವರ 'ಅನುಸಂಧಾನ' ಕೃತಿಯು ಅವರು ಆಗಾಗ ಪತ್ರಿಕೆಗಳಿಗಾಗಿ ಬರೆದ ಸಾಂದರ್ಭಿಕ ಬರಹಗಳು, ಕೆಲವು ವಿಶಿಷ್ಟ ಕೃತಿಗಳ ಕುರಿತ ವಿಮರ್ಶಾ

ಲೇಖನಗಳು, ವಿವಿಧ ವಿಷಯಗಳ ಉಪನ್ಯಾಸಗಳಿಗಾಗಿ ಬರೆದ 25 ಲೇಖನಗಳ ಗುಚ್ಛ. ಇಲ್ಲಿ ಚರಿತ್ರೆ, ಇತಿಹಾಸ, ವ್ಯಕ್ತಿತ್ವ, ಸಾಹಿತ್ಯ, ಸಂಸ್ಕೃತಿ, ಸಮಕಾಲೀನ ಸಂದರ್ಭದ ಸಾಮಾಜಿಕ ವಿದ್ಯಮಾನಗಳು... ಹೀಗೆ ಅನೇಕ ವಿಷಯ ಸಂಗತಿಗಳ ಚರ್ಚೆ, ವಿಮರ್ಶೆ, ಚಿಂತನೆಗಳಿಗೆ ಒಳಗಾಗಿವೆ. ನಮ್ಮ ಅರಿವಿನ ವಿಕಾಸಕ್ಕೆ ತಕ್ಕ ಹೂರಣವನ್ನು ಇಲ್ಲಿಯ ಲೇಖನಗಳು ಒದಗಿಸುತ್ತವೆ. ಶಾಸ್ತ್ರಿಯವರ ಓದಿನ ವ್ಯಾಪ್ತಿ, ಅನುಭವದ ಹರವು ಎಷ್ಟು ದೊಡ್ಡದು, ವಿಶಾಲವಾದುದು ಎಂಬುದಕ್ಕೆ ಈ ಕೃತಿಯು ನಿದರ್ಶನವಾಗಿದೆ.

'ಆತ್ಮಸಖಿ, ತುಂಬು ಹೃದಯ ಬಟ್ಟಲನು' ಎಂಬುದು ಅನುಸಂಧಾನ ಕೃತಿಯ ಮೊದಲ ಲೇಖನ. ಇದು ಬಹುಭಾಷಾ ಕವಿ, ವಿದ್ವಾಂಸರಾದ ಡಾ. ಪಂಚಾಕ್ಷರಿ ಅವರ ಕಾವ್ಯ ಸಾಹಿತ್ಯ (ಸೃಜನ) ಮತ್ತು ಗದ್ಯ ಸಾಹಿತ್ಯ (ಸೃಜನೇತರ)ವನ್ನು ತೌಲನಿಕ ನೆಲೆಯಲ್ಲಿ ಪರಿಶೋಧಿಸುತ್ತಾ ಅವರ ಗದ್ಯವೂ ಅವರ ಕಾವ್ಯದಷ್ಟೇ ಹೃದ್ಯವಾದುದು ಎಂಬುದನ್ನು ನಿರೂಪಿಸುತ್ತದೆ. ಆತ್ಮಸಖಿಯೊಂದಿಗಿನ ಸಂವಾದವು ಭಾಷಿಕರೂಪದಲ್ಲಿ, ಭಾವಸ್ವರೂಪದಲ್ಲಿ ಲಯ ಮಾಧುರ್ಯದಲ್ಲಿ ಗದ್ಯ-ಪದ್ಯಗಳನ್ನು ಅಭಿನ್ನವಾಗಿಸುವ ಶೈಲಿಯಲ್ಲಿ ಮೂಡಿ ಬಂದಿರುವುದನ್ನು ಶೋಧ ನಿಲುವಿನಲ್ಲಿ ಶಾಸ್ತ್ರಿಯವರು ಗುರುತಿಸುತ್ತಾರೆ. ಕವಿ, ಸಂತ, ಋಷಿ ಹೃದಯಿಗಳು ಲೌಕಿಕ ಅಲೌಕಿಕವನ್ನು ಅಭಿನ್ನವಾಗಿಸುವ ಕಾರ್ಯದಲ್ಲಿ ವಿಶಿಷ್ಟ ದೃಷ್ಟಿಯುಳ್ಳವರು. ಜೀವನದ ಒಲವು, ಪ್ರೇಮ, ಅನುಭವ, ಅಧ್ಯಾತ್ಮ, ಆತ್ಯಂತಿಕ ಸತ್ಯಗಳನ್ನು ತಮಗೆ ಸ್ವಾನುಭವವಾಗುವ, ಆತ್ಮಸಾತ್ ಆಗುವ ಸಂವೇದನೆಗೆ ಪೂರಕವಾಗಿ ಆತ್ಮಸಖ – ಆತ್ಮಸಖಿಯರನ್ನು ಹೊಸಬಗೆಯ ಅನುಭಾವದ ಪರಿಭಾಷೆಯಲ್ಲಿ ಆಕೃತಿಗೊಳಿಸಿಕೊಳ್ಳುತ್ತಾರೆ ಅಥವಾ ರೂಪಕವಾಗಿಸಿಕೊಳ್ಳುತ್ತಾರೆ. (ಉದಾ : ಸೂಫಿ, ಝೆನ್, ಟಾವೊ, ಶರಣ ಮೂಲದ ಗಜಲ್‌ಗಳಲ್ಲಿನ 'ಸಾಕಿ', 'ಮಧು', ವನಗಳಲ್ಲಿನ ಆತ್ಮ ಸಂಗಾತ, ಚೆನ್ನಮಲ್ಲಿಕಾರ್ಜುನ, ಕೂಡಲಸಂಗಮ ಇತ್ಯಾದಿ) ಇಲ್ಲಿ ತನ್ನನ್ನು ತಾನು ಆತ್ಮದ ಎದುರಿಗೆ ಮುಕ್ತವಾಗಿ ತೊಳಗಿ-ಬೆಳಗಿಕೊಳ್ಳುವ ಕ್ರಮವಿದೆ. ಇದನ್ನು ಸಾಧಿಸುವ ವಿಶಿಷ್ಟ ಕೃತಿ ಈ 'ಆತ್ಮಸಖಿ..' ಆಗಿದೆ. ಕೃತಿಯಲ್ಲಿ ಮಿರ್ಜಾಗಾಲಿಬ್, ಹರಿವಂಶರಾಯ್ ಬಚ್ಚನ್, ಸುಲ್ತಾನಪುರಿ, ಮಧುರಚೆನ್ನ,

ಠ್ಯಾಗೋರ್ ಮೊದಲಾದ ಕವಿರ್ಯರ ಕಾವ್ಯ ಸಂವಾದ, ಮೇಘದೂತ, ಗೀತಗೋವಿಂದ, ಪ್ರಕೃತಿ, ಆತ್ಮ, ಜೀವನ ಇತ್ಯಾದಿ ವಿಷಯಗಳ ಕುರಿತಾದ ಇಲ್ಲಿನ ಭಾವರೂಪದ ಪತ್ರಗಳು ಪರಮಾತ್ಮನೊಂದಿಗೆ ಸಂಬಂಧ ಕಲ್ಪಿಸುವ ಪರಿಭಾಷೆಯಲ್ಲಿ ಮೂಡಿದ ನಿಷ್ಕಾಮ ಪ್ರೇಮಪತ್ರಗಳು. ಇವು ಕಾವ್ಯ ತಪಸ್ಸಿಯ ಸಿದ್ಧಿಯಾಗಿ ಕೃತಿಯಲ್ಲಿ ಮೂಡಿವೆ ಎಂಬುದನ್ನು ಶಾಸ್ತ್ರಿಯವರು ರಸವಿಮರ್ಶೆ, ದರ್ಶನ ವಿಮರ್ಶೆಯನ್ನು ಸಮ್ಮಿಶ್ರಗೊಳಿಸಿಕೊಂಡು ನಿರೂಪಿಸಿದ್ದಾರೆ ಇಲ್ಲಿ.

'ಮಕ್ಕಳ ಪುಸ್ತಕ ಲೋಕದಲ್ಲೊಂದು ಸುತ್ತು', 'ನಾಡಿನ ಮಕ್ಕಳಿಗೆ ಕರ್ನಾಟಕ ದರ್ಶನ' ಇವು ಮಕ್ಕಳಿಗಾಗಿ ನಾಡಿನ ಹಿರಿಯ ಸಾಹಿತಿ ಶಾ. ಮಂ. ಕೃಷ್ಣರಾಯರಿಂದ ಸಂಪಾದಿಸಿ ಹೇಮಂತ ಸಾಹಿತ್ಯ ಪ್ರಕಾಶನವು ಪ್ರಕಟಿಸಿದ ಚಿಕ್ಕ ಚಿಕ್ಕ ನೂರು ಪುಸ್ತಕಗಳ ಮಹತ್ವವನ್ನು ವಿವರಿಸುವ ಲೇಖನಗಳು. ವೈ. ಎನ್. ಗುಂಡೂರಾವ್, ಚಿರಂಜೀವಿ, ಕೆ. ಎಂ. ರಾಘವ, ಪಿ. ಕೆ. ಖಂಡೋಬಾ, ಬಿ. ಎ. ಸನದಿ, ಎಲ್. ಎಸ್. ಶಾಸ್ತ್ರಿ, ಮಧುಕರ ಗುಂಡೇನಟ್ಟಿ, ಆರ್. ಕೆ. ನಾಯಕ, ವಿಜಯಲಕ್ಷ್ಮಿ, ಜಿ. ಎಸ್. ಭಟ್ಟ, ಸಿ. ಗೋ. ರಮೇಶ ಮೊದಲಾದವರು ಬರೆದ ನಾಡಿನ ಶ್ರೇಷ್ಠ ಕವಿ ಕಲಾವಿದರ ಜೀವನ ಸಾಧನೆಗಳ ಕುರಿತು, ಸಂಗೀತ, ಕಲೆ, ನಾಟಕ, ಸಿನಿಮಾ, ಧರ್ಮಕ್ಷೇತ್ರಗಳು, ಪ್ರವಾಸಿ ತಾಣಗಳು, ವಿಶಿಷ್ಟ ಜನಾಂಗ, ಅವರ ಸಂಸ್ಕೃತಿಗಳು, 'ವಿಜ್ಞಾನಿ - ತಂತ್ರಜ್ಞಾನಿಗಳು, ರಾಜಮಹಾರಾಜರು, ಸಮಾಜ ಸುಧಾರಕರು ಮೊದಲಾದವರ' ಕುರಿತು ಮಕ್ಕಳ ಓದಿಗೆ ಅನುಕೂಲವಾಗುವ ಹಾಗೆ ಸಂಪಾದಿಸಿಕೊಟ್ಟ ಶಾ. ಮಂ. ಕೃಷ್ಣರಾಯರ ಸಾಧನೆಯನ್ನು ಶಾಸ್ತ್ರಿಯವರು ಕೊಂಡಾಡಿದ್ದಾರೆ ಈ ಲೇಖನಗಳಲ್ಲಿ.

ಜೊತೆಗೆ ತಣ್ಣನೆಯ ವಿಷಾದ ಭಾವವೊಂದನ್ನು ಹೊರಹಾಕಿದ್ದು ಸಾಹಿತಿ- ಸಾಹಿತ್ಯಪ್ರಿಯರ, ಕಲಾ ರಸಿಕರ, ಸಹೃದಯರ ಮನಕ್ಕೆ ತಟ್ಟುತ್ತದೆ. ಅದೆಂದರೆ- 'ಬೆಳೆಯೇನೋ ಹುಲುಸಾಗಿದೆ. ಕೊಯ್ಯುವವರು, ತಿನ್ನುವವರು ಯಾರು? ಎಂದು ಸಾಂಕೇತಿಕವಾಗಿ, ಮಾರ್ಮಿಕವಾಗಿ ಈ ಪುಸ್ತಕಗಳನ್ನು ಬೆಂಗಳೂರಿನ ಕ.ಸಾ.ಪರಿಷತ್ ಭವನದಲ್ಲಿ ನಾಡಿನ ಖ್ಯಾತ ಸಾಹಿತಿ ನಾ. ಡಿಸೋಜಾ ಅವರು ನುಡಿದರಂತೆ. ಇದು ಇಂದು ಪುಸ್ತಕಗಳನ್ನು ಓದುವವರ ಸಂಖ್ಯೆ ಕಡಿಮೆಯಾದುದನ್ನು, ಇದಕ್ಕೆ ಆಧುನಿಕ ತಂತ್ರಜ್ಞಾನದ ಆಡಂಬರ, ಸೌಲಭ್ಯ

ಮಾಧ್ಯಮಗಳು ಕಾರಣವಾದುದನ್ನು, ವಿಚಿತ್ರ ಪರಿಸರ ನಿರ್ಮಾಣವಾದುದನ್ನು ನೆನಪಿಸಿಕೊಳ್ಳುತ್ತ ವಿಷಾದ ಪಡುವಂತಿದೆ. ಇಂಥದ್ದರಲ್ಲಿ ನಾಡಿನ ಹೇಮಂತ ಸಾಹಿತ್ಯ ಪ್ರಕಾಶನ, ಐಬಿಎಚ್ ಪ್ರಕಾಶನ, ರಾಷ್ಟ್ರೋತ್ಥಾನ ಪ್ರಕಾಶನ ಮೊದಲಾದವುಗಳು ಲಾಭ-ನಷ್ಟಗಳನ್ನು ಲೆಕ್ಕಿಸದೆ ಪ್ರಕಾಶನ ಕಾರ್ಯವನ್ನು ಸಮಾಜಸೇವೆಯಾಗಿ ಮಾಡುತ್ತಿರುವುದನ್ನು ನಮಗೆ ಮನದಟ್ಟು ಮಾಡಿಕೊಡುತ್ತಾರೆ ಶಾಸ್ತ್ರಿಯವರು. ಇಂಥ ಪ್ರಕಾಶನಗಳ ಸರಳ ಸುಂದರ ಕೃತಿಗಳನ್ನು ನಾಡಿನ ಭವಿಷ್ಯದ ಕುಡಿಗಳು ಓದಿ ಕಸುವು ತುಂಬಿಕೊಳ್ಳಬೇಕು. ಸಮಗ್ರ ಕರ್ನಾಟಕ ದರ್ಶನ ಮಾಡಿಸುವ ಇಂಥವುಗಳನ್ನು ಸರ್ಕಾರ, ಸಂಸ್ಥೆಗಳು ಎಲ್ಲ ಶಾಲಾ ಕಾಲೇಜು ಮಕ್ಕಳಿಗೆ ಒದಗಿಸಬೇಕು ಎಂಬುದು ಲೇಖನದ ಆಶಯವಾಗಿದೆ.

ಶಾಸ್ತ್ರಿಯವರ ಮೇಲೆ ಪ್ರಭಾವ ಬೀರಿದ ಮಹನೀಯರಲ್ಲಿ ಕವಿ ಜಿ. ಆರ್. ಪಾಂಡೇಶ್ವರ ಅವರೂ ಒಬ್ಬರು. ಗೋವಿಂದ ಪೈ, ಕಾರಂತರ ಸಮಕಾಲೀನರಾದ ಗಣಪತರಾವ್ ಪಾಂಡೇಶ್ವರರವರು ಕನ್ನಡ ಪತ್ರಿಕಾ ಕ್ಷೇತ್ರ ಮತ್ತು ಸಾಹಿತ್ಯ ಕ್ಷೇತ್ರ ಎರಡರಲ್ಲೂ ಸಾಧನೆ ಮಾಡಿದವರು. ಉಡುಪಿ ಜಿಲ್ಲೆಯ ಪಾಂಡೇಶ್ವರರು ಗಾಂಧೀಜಿಯವರಿಂದ ಪ್ರಭಾವಿತರಾಗಿ ತಾವು ನಂಬಿದ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಪತ್ರಿಕಾ ಧರ್ಮ, ಸಾಹಿತ್ಯ ಧರ್ಮಗಳೆರಡನ್ನೂ ಜೀವನ ಧರ್ಮವಾಗಿ ಬಾಳಿನಲ್ಲಿ ಅಳವಡಿಸಿಕೊಂಡು ಬಾಳಿದ ಮಹನೀಯರು. ಸ್ವಾತಂತ್ರ್ಯ ಹೋರಾಟ, ಸಮಾಜ ಸುಧಾರಣೆಗಾಗಿ ಜೀವನವನ್ನು ಸವೆಸಿದವರು. 'ಬೆಳಕಿನ ಬೀಜಗಳು ನಾವು । ನಮಗೆಲ್ಲಿಯ ಸಾವು?' ಎಂಬ ಆತ್ಮಬಲ, ವಿಶ್ವಾಸಗಳೊಂದಿಗೆ ಬದುಕಿದ ಪಾಂಡೇಶ್ವರರು ಇಂಗ್ಲೀಷ್, ಕನ್ನಡ, ಸಂಸ್ಕೃತ ಹೀಗೆ ಉಭಯಭಾಷಾವಿಶಾರದರಾಗಿ ಬದುಕಿನಲ್ಲಿ ಆಶಾವಾದಿಗಳಾಗಿ ಕಟ್ಟಿದ ಕಾವ್ಯ ತುಂಬ ವಿಶಿಷ್ಟವಾದುದು. ಪತ್ರಿಕಾ ವೃತ್ತಿಯಲ್ಲಿ ಮೂಡಿದ ನಿಷ್ಠುರತೆ, ಕಾವ್ಯಸಾಹಿತ್ಯ ಸೃಷ್ಟಿಯಲ್ಲಿ ತುಂಬಿದ ಜೀವನ ಪ್ರೀತಿ, ಉದಾರತೆ, ಸಹೃದಯತೆ, ಮಾನವೀಯತೆಗಳು ಅವರ ಮತ್ತು ಅಂದಿನ (ನವೋದಯ) ಕಾಲದ ಮನೋಧರ್ಮವಾದದ್ದನ್ನು ಅವರ ಕಾವ್ಯ, ಯಕ್ಷಗಾನ, ಗೀತ ರೂಪಗಳ ತುಣುಕುಗಳನ್ನಾಯ್ದು 'ಬೆಳಕಿನ ಬೀಜ ಗಣಪತರಾವ್ ಪಾಂಡೇಶ್ವರ' ಎಂಬ ಲೇಖನದಲ್ಲಿ ಸಾಬೀತುಪಡಿಸುತ್ತಾರೆ ಶಾಸ್ತ್ರಿಯವರು.

ಕನ್ನಡ ಜಾನಪದ ಸಾಹಿತ್ಯ, ವಿಮರ್ಶೆ, ಚಿಂತನೆ, ಸಂಶೋಧನೆಯಲ್ಲಿ ಪ್ರೊ. ಜ್ಯೋತಿ ಹೊಸೂರ ಅವರು ಕಳೆದ 50 ವರ್ಷಗಳಿಂದ ನೀಡಿದ ಕೊಡುಗೆ ವಿಶಿಷ್ಟವಾದುದು. ಭಿಡೆ ಇಲ್ಲದ, ನಿಷ್ಪಕ್ಷಪಾತತನದ ಅವರ ವೈಚಾರಿಕ-ವೈಜ್ಞಾನಿಕ ನಿಲವುಗಳು ಹಲವರಿಗೆ ಬೆರಗು ಮೂಡಿಸಿದವುಗಳು. ಅವರ ಅಂಥ ನಿಲವು, ನಡೆಗಳ ಗಾಂಭೀರ್ಯ ಮತ್ತು ವೈಶಿಷ್ಟ್ಯಗಳನ್ನು ಗುರುತಿಸುವ ನಿಟ್ಟಿನಲ್ಲಿ ಇತ್ತೀಚೆಗೆ ಅವರಿಂದ ಮೂಡಿಬಂದ 'ಸಂಗೊಳ್ಳಿ ರಾಯಣ್ಣ ಚರಿತ್ರೆ – ಸಂಶೋಧನೆ' ಎಂಬ ಗ್ರಂಥವನ್ನು ಶಾಸ್ತ್ರಿಯವರು – 'ಸಂಶೋಧನೆಯ ಹೊಸ ಬೆಳಕಿನಲ್ಲಿ ರಾಯಣ್ಣ' ಲೇಖನದಲ್ಲಿ ನಿರೂಪಿಸಿದ್ದಾರೆ. ಲೇಖನದಲ್ಲಿ ಸಂಗೊಳ್ಳಿ ರಾಯಣ್ಣ ಕುರಿತು ಪೂರ್ವಾಗ್ರಹಪೀಡಿತ ದೃಷ್ಟಿಕೋನ, ಅವಾಸ್ತವಿಕತೆ, ಭ್ರಮಾತ್ಮಕ ಸಂಗತಿಗಳು, ಗಾಳಿ ಮಾತುಗಳು, ಊಹೆ-ಕಲ್ಪಕತೆ ಇತ್ಯಾದಿಗಳನ್ನು ಐತಿಹಾಸಿಕ, ಚಾರಿತ್ರಿಕ ಮತ್ತು ಸಾಹಿತ್ಯಿಕ ಆಧಾರಗಳೊಂದಿಗೆ ಹೊಡೆದೋಡಿಸುವ, ವಾಸ್ತವಿಕ ನೆಲೆಯಲ್ಲಿ ರಾಯಣಣ್ಣನ ಬದುಕನ್ನು ತೂಗಿ ನೋಡುವ ಅಲ್ಲದೆ ಕಿತ್ತೂರು ಸಂಸ್ಥಾನದ ಇತಿಹಾಸವನ್ನು ಇನ್ನೊಂದು ಬಗೆಯಲ್ಲಿ ಕಂಡರಿಸುವ ಆಯಾಮವಾಗಿ ಹೊಸೂರ ಅವರ ಕೃತಿ ಮೂಡಿ ಬಂದುದನ್ನು ವಿವರಿಸಲಾಗಿದೆ.

'ಕನ್ನಡ ಸಾಹಿತ್ಯದ ಧಾರಾವಾಹಿ ಪ್ರತಿಭೆ – ಪ್ರೇಮಾ ಭಟ್' ಲೇಖನವು ಕನ್ನಡ ನಾಡಿನ ಜನಪ್ರಿಯ ಲೇಖಕಿ ಪ್ರೇಮಾ ಭಟ್‌ರ ಜೀವನ ವಿವರಗಳೊಂದಿಗೆ ಅವರ ಸಾಹಿತ್ಯಿಕ ಸಾಧನೆಯನ್ನು ಅದರ ಅನನ್ಯತೆಯನ್ನು ವಿವರಿಸುತ್ತದೆ. ಭಾರತೀಯ ಸಾಮಾಜಿಕ, ಕೌಟುಂಬಿಕ ಕಟ್ಟುಪಾಡುಗಳು, ಸಾಮಾಜಿಕ ವಿಷಮತೆಗಳು, ಸ್ತ್ರೀ ತಾರತಮ್ಯಗಳು, ಅವಳ ನಿಸ್ವಾರ್ಥ ಬದುಕಿನ ರೀತಿ ನೀತಿಗಳು, ಪುರುಷ ಪ್ರಧಾನ ನಿಲುವುಗಳು ಇತ್ಯಾದಿಗಳನ್ನು ಅವರ – 'ಅವಳ ಬಾಳು' ಸುಜಾತಾ, ಬೆಕ್ಕಿನ ಕಣ್ಣು, ಆಡಿ ಬಾ ಅರಗಿಣಿಯೆ, ಭೂಮಿಕಾ, ದೇವರಾಣಿ ಇತ್ಯಾದಿ ಕೃತಿಗಳ ವೈಶಿಷ್ಟ್ಯದೊಂದಿಗೆ ವಿವರಿಸುವುದಾಗಿದೆ.

ಸಾಹಿತ್ಯ ಪರಂಪರೆಗೆ ಬೆಳಗಾವಿ ಜಿಲ್ಲೆಯು ತಕ್ಕ ಮಟ್ಟಿಗೆ ಕಸುವು ತುಂಬಿ ಕೊಟ್ಟಿದೆ. 'ಗಡಿನಾಡ ಕವಯಿತ್ರಿಯರು' ಎಂಬ ಲೇಖನವು ಇದನ್ನು ಚಾರಿತ್ರಿಕವಾಗಿ ದಾಖಲಿಸಿದ ರೂಪದಲ್ಲಿ ಮೂಡಿದೆ. ಈ ಜಿಲ್ಲೆಯ ಸಾಹಿತ್ಯ

ಪರಂಪರೆಯಲ್ಲಿ ಶಾಂತಾದೇವಿ ಮಾಳವಾಡ, ಶಾಂತಾದೇವಿ ಕಣವಿ, ಸರಸ್ವತಿ ಗೌಡರ ಮೊದಲಾದವರಾದಿಯಾಗಿ ಪ್ರಸ್ತುತ ಸಂದರ್ಭದವರೆಗೆ- ಹಿರಿಯರು, ಮಧ್ಯಕಾಲದವರು ಹಾಗೂ ಉದಯೋನ್ಮುಖರು ಎಂದು ಮೂರು ಹಂತಗಳಲ್ಲಿ ಶಾಸ್ತ್ರಿಯವರು ಬೆಳಗಾವಿ ಜಿಲ್ಲೆಯ ಲೇಖಕಿಯರ ಬಹುದೊಡ್ಡ ಪಟ್ಟಿಯನ್ನೇ ಅವರವರ ಪ್ರಾತಿನಿಧಿಕ ಕೃತಿಗಳನ್ನು ಉಲ್ಲೇಖಿಸುವುದರ ಮೂಲಕ ಇಲ್ಲಿ ನೀಡಿದ್ದು ಮತ್ತು ಬಹು ಸೂಕ್ಷ್ಮವಾಗಿ, ನವಿರಾಗಿ ಹೊಸ ಬರಹಗಾರರಿಗೆ ಆಳ ಓದಿನ ಪ್ರೇರಣೆ ನೀಡಿದ್ದು ಲೇಖನದ ವಿಶೇಷ.

'ಕಾದಂಬರಿ ಸಾಮ್ರಾಟ'ರೆಂಬ ಕೀರ್ತಿಗೆ ಭಾಜನರಾದ ಅ.ನ.ಕೃ ರವರ ಸಾಧನೆಯನ್ನು ಕುರಿತು ಅನೇಕರು ಬರೆದಿದ್ದಾರೆ. ಅವರಲ್ಲಿ ಈ ಶಾಸ್ತ್ರಿಯವರೂ ಒಬ್ಬರು. ಸಂಧ್ಯಾರಾಗ, ಕಟ್ಟಿದ ಬಣ್ಣ, ಮಿಯಾ ಮಲ್ಹಾರ್ ಕಾದಂಬರಿಗಳು- ಅನಕೃರಿಗೆ ಅತ್ಯಂತ ಜನಪ್ರಿಯತೆಯನ್ನು ತಂದುಕೊಟ್ಟ ಸಂಗೀತಕ್ಕೆ ಸಂಬಂಧಿಸಿದ ಕಾದಂಬರಿಗಳು. ಕನ್ನಡ ನಾಡಿನ ಚರಿತ್ರೆ, ಇತಿಹಾಸ, ಕಲೆ, ಸಂಸ್ಕೃತಿಗಳ ಕುರಿತು ಅನಕೃರವರಿಗಿದ್ದ ಸಂಗೀತಾಸಕ್ತಿ, ಉತ್ತರಾದಿ, ದಕ್ಷಿಣಾದಿ ಸಂಗೀತ ಪದ್ಧತಿಗಳ ಕುರಿತು ಅವರಿಗಿದ್ದ ವಿಶೇಷ ಅರಿವು, ಅಂಥ ಅವರ ಪರಿಸರದದತ್ತ ಸಾಂಗತ್ಯ ಅದು ಕಾರಣವಾಗಿ ಅವರಿಂದ ಮೂಡಿದ ಈ ಮೂರು ಕಾದಂಬರಿಗಳ ಒಳ ಹೂರಣ, ಸಂಗೀತ ಕ್ಷೇತ್ರದ ರಾಜಕೀಯ, ಕಲಾವಿದರ ನಡುವಿರುವ ಈರ್ಷೆಗಳು, ಅವರಿಗೊದಗುವ ದುರ್ದೆಸೆ ಸಿಗುವ ಮಾನ-ಸಮ್ಮಾನ ಇತ್ಯಾದಿ ಸಂಗತಿಗಳನ್ನು, ಅವುಗಳ ವೈಶಿಷ್ಟ್ಯಗಳನ್ನು ತಿಳಿಸಿಕೊಡುವುದು ಶಾಸ್ತ್ರಿಯವರ ಸಂಗೀತಾಸಕ್ತಿಯ ಒಲವೂ ಆಗಿದೆ. ಈ ನಿಟ್ಟಿನಲ್ಲಿ 'ಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದ ಅನಕೃ ಕಾದಂಬರಿಗಳು ಅನುಸಂಧಾನದ ವಿಶಿಷ್ಟ ಲೇಖನವಾಗಿದೆ.

'ನಿಜಸುಖಿ, ಮಹಾಜ್ಞಾನಿ, ಹಡಪದ ಅಪ್ಪಣ್ಣ', 'ಕುಂಬಾರ ಗುಂಡಯ್ಯ... ಕಾಯಕದಿಂದ ಕೈಲಾಸಕ್ಕೆ', ಮತ್ತು 'ಸ್ವರವಚನಕಾರ ನೀರಲಕೇರಿ ಶರಣರು' ಎಂಬ ಲೇಖನಗಳು ಕನ್ನಡ ನಾಡಿನ ಶರಣ, ಸಂತ, ಅನುಭಾವಿ ಪರಂಪರೆಗಳನ್ನು ಮೆಲುಕು ಹಾಕುವ ಆಶಯದಲ್ಲಿ ಮೂಡಿಬಂದಿವೆ. ಬಿಜಾಪುರ - ಬಾಗೇವಾಡಿ ಪ್ರದೇಶದ ಹಡಪದ ಅಪ್ಪಣ್ಣ 12 ನೆಯ

ಶತಮಾನದ ಶಿವಶರಣರಲ್ಲಿ ಒಬ್ಬನಾಗಿ ಬಸವಣ್ಣನವರ ಆಪ್ತ ಕಾರ್ಯದರ್ಶಿಯಂತಿದ್ದು, ಹಡಪದ ಕಾಯಕ (ಕ್ಷೌರಿಕ ಕಾಯಕ, ವೀಳ್ಯ ನೀಡುವ ಕಾಯಕ ಎಂಬರ್ಥಗಳೂ ವ್ಯಕ್ತಗೊಂಡಿವೆ) ನಿಷ್ಠೆಯನ್ನು ಮೆರೆದವನು. ಪುರಾಣಾಗಮ ವೇದೋಪನಿಷತ್ತುಗಳನ್ನೋದಿ ಮಹಾಜ್ಞಾನಿ ಎನಿಸಿಕೊಂಡ ಈತ ಅಂತರಂಗ ಶೋಧ, ಬದುಕಿನ ತಿರುಳನ್ನು ಹಿಡಿಯಲು ಹವಣಿಸುವ ಭಾವದಲ್ಲಿ ವಚನಗಳನ್ನು ಬರೆದದ್ದನ್ನು, ಬೀದರ ಜಿಲ್ಲೆಯ ಕುಂಬಾರ ಗುಂಡಯ್ಯನು ತನ್ನ ಭಕ್ತಿ ಪಾರಮ್ಯದಲ್ಲಿ ಶಿವನನ್ನೇ ಕುಣಿಸಿದ ಬಗೆಯನ್ನು, ಶಿವಯೋಗಿ ನೀರಲಕೇರಿ ಶರಣರ ತಪೋಸಾಧನೆ ಹಾಗೂ ಅವರ ಸಮಕಾಲೀನ ಯೋಗಿಗಳ ಶರಣರ ಸಾಧನೆಯ ವಿವರಗಳನ್ನು ಈ ಲೇಖನಗಳಲ್ಲಿ ಶಾಸ್ತ್ರಿಯವರು ಸಾಧಾರವಾಗಿ ವಿವರಿಸಿದ್ದಾರೆ.

ಕನ್ನಡದಲ್ಲಿ ನಿಸರ್ಗದ ಚೆಲುವನ್ನು, ಋತುಮಾನಗಳ ಸೊಗಸನ್ನು ಕುರಿತು ಹಾಡದ ಕವಿಗಳಿಲ್ಲ. ಕವಿ ಕುವೆಂಪು, ಬೇಂದ್ರೆ, ಜಿ.ಎಸ್.ಎಸ್, ಪಂಜೆ, ಕಡೆಂಗೊಡ್ಲು, ಚೆನ್ನವೀರ ಕಣವಿ, ಕೆ.ಎಸ್.ಎನ್, ಪುತಿನ, ವೀ.ಸಿ. ಅಡಿಗ, ಲಂಕೇಶ, ಲಕ್ಷ್ಮೀನಾರಾಯಣ ಭಟ್, ಜಿನದತ್ತ ದೇಸಾಯಿ, ಚಂದ್ರಶೇಖರ ಕಂಬಾರ, ಆಲನಹಳ್ಳಿ ರಾಮಚಂದ್ರ ಶರ್ಮ ಹೀಗೆ ಪಟ್ಟಿ ಬೆಳೆಯುತ್ತ ಹೋಗುತ್ತದೆ. ರವಿ ಕಾಣದ್ದನ್ನು ಕವಿ ಕಾಣುವ ಬಯಕೆ. ಭಾವದಲೆಗಳಲ್ಲಿ ಈಜಿ ನೋಡುವ ಪಯಣ. ಚೈತ್ರ, ವೈಶಾಖ, ಶ್ರಾವಣ, ಸೂರ್ಯ, ಚಂದ್ರ, ತಾರೆ, ಕಡಲು, ಹೂ, ಹಕ್ಕಿ, ದಿವ್ಯ ರಮ್ಯ ಚೇತನ ಹೀಗೆ ಕವಿಯ ಕಣ್ಣಲ್ಲಿ ಮೂಡುವ ನಿಸರ್ಗ ಸೌಂದರ್ಯವನ್ನು ಕೆಲವು ಅಪರೂಪದ ಭಾವಗೀತದ ನುಡಿಗಳೊಂದಿಗೆ ಕಟ್ಟಿಕೊಡುವ ವಿಶಿಷ್ಟ ಲೇಖನವಾಗಿ ಮೂಡಿದೆ 'ಕವಿಯ ಕಣ್ಣಿನಲ್ಲಿ ನಿಸರ್ಗ' ಎಂಬುದು.

'ಬೆಳಗಾವಿ ಜಿಲ್ಲೆಯ ಮೊದಲ ಐದು ಪತ್ರಿಕೆಗಳು 'ಲೇಖನದಲ್ಲಿ ಶಾಸ್ತ್ರಿಯವರು 1849 ರಲ್ಲಿ ಬೆಳಗಾವಿಯಲ್ಲಿ ಬೀರು ಶೇಷು ಎಂಬವರ ಸಂಪಾದಕತ್ವದಲ್ಲಿ ಹುಟ್ಟಿದ ಸುಬುದ್ಧಿ ಪ್ರಕಾಶ ವಾರಪತ್ರಿಕೆಯಿಂದ ಹಿಡಿದು ಇಲ್ಲಿಯವರೆಗೆ ಹುಟ್ಟಿ ಬೆಳೆದುಬಂದ ಕನ್ನಡ-ಮರಾಠಿ ಪತ್ರಿಕೆಗಳು, ಅವುಗಳ ಸಂಪಾದಕರು, ಮುದ್ರಣಾಲಯಗಳು, ಅವುಗಳ ಸಮಾಜ ಸುಧಾರಣೆ, ಸ್ವಾತಂತ್ರ್ಯ

ಹೋರಾಟ, ಏಕೀಕರಣ ಚಳುವಳಿ, ಗಡಿ ಭಾಷೆಗಳ ಆಂದೋಲನ ಇತ್ಯಾದಿಗಳ ನೆಲೆಯಲ್ಲಿ ಅವುಗಳು ಮಾಡಿದ ಕಾರ್ಯಸಾಧನೆಯ ಚರಿತ್ರೆಯನ್ನು ನಿಖರವಾಗಿ ದಾಖಲಿಸಿದ್ದಾರೆ. ಜಿಲ್ಲೆಯ ಪತ್ರಿಕಾ ಪ್ರಪಂಚ ಮತ್ತು ಅದರ ಸಾಧನೆಯನ್ನು ವಿಶಿಷ್ಟವಾಗಿ ತೆರೆದಿಟ್ಟ ಇದು ಚರಿತ್ರೆಯ, ಇತಿಹಾಸದ ನಿರ್ಮಾಣಕ್ಕೆ ಪೂರಕ ವಿವರಗಳನ್ನು ನೀಡುವ ಮಹತ್ವದ ಲೇಖನ.

ಚೆನ್ನವೀರ ಕಣವಿ, ಪಂಚಾಕ್ಷರಿ ಹಿರೇಮಠ, ಜಿನದತ್ತ ದೇಸಾಯಿಯವರ ಚುಟಕುಗಳನ್ನು ಉಲ್ಲೇಖಿಸಿ ಚುಟುಕಿನ ಸತ್ವ ಶಕ್ತಿ ಸ್ವರೂಪ, ಅದರ ಪರಿಣಾಮಗಳನ್ನು ವಿವರಿಸುವ ವಿಶಿಷ್ಟ ಲೇಖನ 'ಚುಟುಕು ಸಸ್ಯೋದ್ಯಾನದಲ್ಲಿ ಅರಳಿದ ಮೂರು ಸುಂದರ ಪುಷ್ಪಗಳು'. ಶಾಸ್ತ್ರಿಯವರು ಈ ಮೂವರು ಕವಿಗಳ ಚುಟುಕು ಸಾಹಿತ್ಯದ ಕೊಡುಗೆಯನ್ನು ವಿವರಿಸುವುದರ ಜೊತೆಗೆ, ಕನ್ನಡ ಚುಟುಕಿನ ಚರಿತ್ರೆಯನ್ನು ಇಲ್ಲಿ ದಾಖಲಿಸಿದ್ದಾರೆ. ಈ ಸಾಹಿತ್ಯಕ್ಕೆ ಪರಿಷತ್ತು ಕಟ್ಟಿ, ಅದರ ಅಧ್ಯಕ್ಷ ಜವಾಬ್ದಾರಿ ಹೊತ್ತು ಚುಟುಕು ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿ ಅದರ ಪರಂಪರೆಯನ್ನು ನಿರ್ಮಿಸುತ್ತಿರುವ ಎಂ.ಜಿ.ಆರ್. ಅರಸರ ಅವಿರತ ಸಾಧನೆಯನ್ನು ಈ ಲೇಖನದಲ್ಲಿ ಸ್ಮರಿಸಲಾಗಿದೆ.

ಸಾನೇ ಗುರೂಜಿಯ 'ಶ್ಯಾಮ್‌ಚಿ ಆಯಿ', ಭೈರಪ್ಪನವರ 'ಕವಲು', ಯಕ್ಷಗಾನ ಕಲೆ, 1857 ರ ಮಹಾ ಬಂಡಾಯ, ಹಿಂದುತ್ವದ ಪರಿಭಾಷೆಯ ಗೊಂದಲ, ಬೆಳಗಾವಿಯ ಸಾಹಿತ್ಯ ಸಂಸ್ಕೃತಿಯ ಪರಿಸರ, ಪತ್ರಕರ್ತನ ನಿಷ್ಠೆ, ಆರೋಗ್ಯ ರಕ್ಷಣೆಯಲ್ಲಿ ನಿಸರ್ಗದ ಪಾತ್ರ, ಕಾಸರಗೋಡಿನ ಕಯ್ಯಾರರ ಸಾಧನೆ ಆಪ್ತ ಕವಿಮಿತ್ರ ರವಿ ಉಪಾಧ್ಯೆ ಅವರ ಸಾಧನೆ ಮತ್ತು ಅವರ ದುರಂತ ಸಾವು ಇತ್ಯಾದಿ ವಿಷಯಗಳ ಕುರಿತ ಶಾಸ್ತ್ರಿ ಅವರ ಲೇಖನಗಳು ಆಯಾ ಕಾಲದ ಸ್ಥಿತಿ ಸಂದರ್ಭಗಳಲ್ಲಿ ಘಟಿಸಿದ, ಘಟಿಸುವ ಸಂಗತಿಗಳನ್ನು, ವಿಷಯುಗಳನ್ನು ರೂಪುಗೊಂಡ ಕೃತಿ ಆಕೃತಿಗಳನ್ನು ಮೂಡಿನಿಂತ ಆಲೋಚನೆಗಳನ್ನು ಕಾಲಧರ್ಮಕ್ಕೆ ತಕ್ಕಂತೆ ಚಿಂತನೆಗೆ ಒಡ್ಡಿವೆ.

ಒಟ್ಟಿನಲ್ಲಿ 'ಅನುಸಂಧಾನ' ಕೃತಿಯು ಚಾರಿತ್ರಿಕ ಸಂಗತಿಗಳೊಂದಿಗೆ, ಐತಿಹಾಸಿಕ ದಾಖಲೆಗಳೊಂದಿಗೆ, ತಾತ್ವಿಕ ನಿಲುವುಗಳೊಂದಿಗೆ ನಮ್ಮನ್ನು ಮುಕ್ತವಾದ ಅನುಸಂಧಾನಕ್ಕೆ ಒಳಗು ಮಾಡುತ್ತದೆ. ಶಾಸ್ತ್ರಿಯವರದು ಗೊಂದಲವಿಲ್ಲದ ಬರವಣಿಗೆ. ಸರಳವಾದ ಹದವರಿತ ಭಾಷೆ, ನೇರ

ನಿರೂಪಣೆ, ಚಿಕ್ಕ ಚಿಕ್ಕ ವಾಕ್ಯ, ವಿಷಯಕ್ಕೆ ತಕ್ಕ ಆವರಣ, ಪೂರಕ ಆಧಾರ, ಮುಕ್ತ ಮನಸ್ಸಿನ ಅರಿವು, ಸತ್ಯಕ್ಕೆ ಸಲ್ಲುವ ವಿವರಣೆಗಳೊಂದಿಗೆ ಓದುಗರ ಮನವನ್ನು ಗೆಲ್ಲುತ್ತದೆ. ಶಾಸ್ತ್ರಿಯವರು ಬದುಕು-ಬರಹವನ್ನು ಶಿಸ್ತುಬದ್ಧವಾಗಿ ರೂಪಿಸಿಕೊಂಡವರು. ಇಲ್ಲಿನ ಬಹುಪಾಲು ಲೇಖನಗಳು ನಾಡಿನ ಕೆಲವು ಸಭೆ-ಸಮಾರಂಭಗಳಲ್ಲಿ ನೀಡಿದ ಉಪನ್ಯಾಸಗಳು. ಕೆಲವು ಸಕಾಲಕ್ಕೆ ಮೂಡಿದ ವೈಚಾರಿಕ ರೂಪಗಳು. ಅರಿವಿನ ವಿಸ್ತಾರಕ್ಕೆ ಇವುಗಳನ್ನು ಒಂದೆಡೆ ಸೇರಿಸಿ ನಮ್ಮೊಂದಿಗೆ 'ಅನುಸಂಧಾನ'ಗೊಳಿಸಿದ್ದಕ್ಕೆ ನಾವು ಎಲ್. ಎಸ್. ಶಾಸ್ತ್ರಿ ಅವರಿಗೆ ಚಿರಋಣಿಗಳು.

■■



ಪರಿಗಂಧ

ಎಲ್. ಎಸ್. ಶಾಸ್ತ್ರಿ ಅಭಿನಂದನ ಸಂಪುಟ

- ಶಾಸ್ತ್ರಿಗಳು ಬದುಕನ್ನು ಅನನ್ಯವಾಗಿ ಪ್ರೀತಿಸಿದವರು, ಹಾಗಾಗಿ ಅವರ ಬದುಕು ಬರೆಹಗಳು ಬೇರೆಯಾಗಿಲ್ಲ. ಅವರಲ್ಲಿ ಅಪಾರ ಜೀವನೋತ್ಸಾಹವಿದೆ.

  –ಡಾ। ಸಿದ್ಧರಾಮ ಮಹಾಸ್ವಾಮಿಗಳು

- ಸರಳ ಸಜ್ಜನ ನಡೆ, ಸೌಜನ್ಯಶೀಲ ಬದುಕು ಮಾದರಿಯಾದುದು. ನಯ ವಿನಯ ಸಂಪನ್ನರಾದ ಎಲ್. ಎಸ್. ಶಾಸ್ತ್ರಿ ಅವರು ಬೆಳಗಾವಿಯ ಸಾಕ್ಷಿಪ್ರಜ್ಞೆ ಎನಿಸಿದ್ದಾರೆ.

  –ಶ್ರೀ. ಮ.ನಿ.ಪ್ರ. ಗುರುಸಿದ್ಧ ಮಹಾಸ್ವಾಮಿಗಳು

- ಶಾಸ್ತ್ರಿಯವರ ಪರಹಿತಾರ್ಥ ಚಿಂತನೆ ಹಾಗೂ ಸಂಘಟನಾ ಸಾಮರ್ಥ್ಯ ನನ್ನನ್ನು ಚಕಿತಗೊಳಿಸಿದೆ.

  –ಡಾ. ಚೆನ್ನವೀರ ಕಣವಿ

- ನಾನು ಕಂಡ ಅಪರೂಪದ ಗಣ್ಯವ್ಯಕ್ತಿಗಳಲ್ಲಿ ಶಾಸ್ತ್ರಿ ಎಂದೆಂದಿಗೂ ಮರೆಯಲಾಗದವರು ಹಾಗೂ ಮರೆಯಬಾರದವರು. ಅವರು ಹೃದಯ ವಿಹಾರಿ.

  –ಡಾ। ಹಂ.ಪ. ನಾಗರಾಜಯ್ಯ

- ಶಾಸ್ತ್ರಿಗಳು ಬಹುಶ್ರುತ ಓದುಗ–ಅಭ್ಯಾಸಿ, ಬಹುಮುಖಿ ಲೇಖಕ.

  –ಡಾ ಶ್ಯಾಮಸುಂದರ ಬಿದರಕುಂದಿ

- ಶಾಸ್ತ್ರಿ ನ್ಯಾಯವಾಗಿ ಒಂದು ದೊಡ್ಡ ವಿಶ್ವವಿದ್ಯಾಲಯದ ಉಪಕುಲಪತಿಗಳಾಗುವಷ್ಟು ಪಂಡಿತರು. ಅವರು ಮಾಡಿದ ಸಾಹಿತ್ಯ ಸೇವೆ, ಕನ್ನಡ ಪರಿಚಾರಿಕೆ ಗುಡ್ಡದಷ್ಟು ದೊಡ್ಡದು.

  –ಶ್ರೀ ಭೀಮಸೇನ ತೊರಗಲ್ಲ

- ಶಾಸ್ತ್ರಿಯವರು ಒಂದು ಸಂಸ್ಥೆಯಂತೆ ಹತ್ತಾರು ಪ್ರತಿಭೆಗಳನ್ನು ಪೋಷಿಸಿ ಬೆಳೆಸಿದ್ದಾರೆ. ಅವರು ಹಚ್ಚಿದ ನೂರಾರು ಹಣತೆಗಳು ಸಾಹಿತ್ಯಲೋಕವನ್ನು ಬೆಳಗುತ್ತಿವೆ.

  –ಡಾ। ಬಸವರಾಜ ಜಗಜಂಪಿ

- ಶಾಸ್ತ್ರೀಜಿ ಅಂಥವರು ಎಲ್ಲಿದ್ದರೂ ಚಂದ; ಅವರು ಸುವಾಸನೆ ಬೀರುವ ಶ್ರೀಗಂಧ!

  –ಶ್ರೀ ಮಲ್ಲಿಕಾರ್ಜುನ ಹುಲಗಬಾಳಿ

- ಶಾಸ್ತ್ರಿಯವರದ್ದು ಬಹುಮುಖ ವ್ಯಕ್ತಿತ್ವ. ಹಲವಾರು ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧಕರೆನಿಸಿದ್ದಾರೆ.

  –ಶ್ರೀ ಬಿ. ಎಸ್. ಗವಿಮಠ

- ವರ್ಣರಂಜಿತ ವ್ಯಕ್ತಿತ್ವ, ಸರಸ್ವತಿಯ ವಿಸ್ಮಯಪುತ್ರ. ಬೆಳಗಾವಿ ಕನ್ನಡಿಗರಿಗೆ ಮೋಹಕಮೂರ್ತಿ. ಅವರೊಬ್ಬ ಅಭಿನವ ಕಾರಂತ.

  –ಪ್ರೊ. ಎಂ. ಎಸ್. ಇಂಚಲ

ISBN:978-81-88699-35-3